ಬಗೆ ಹರಿದಿದ್ದು, ಈಗ ಕಾಮಗಾರಿ ಪ್ರಗತಿಯಲ್ಲಿದ್ದು, 2010 ರಲ್ಲಿ ಪೂರ್ಣಗೊಳಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

<u>ಕರ್ನಾಟಕ ವಿಧಾನ ಸಭೆ</u>.

11 ಶ್ರೀ ಪ್ರತಾಪಗೌಡ ಪಾಟೀಲ (ಮಸ್ಕಿ)
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು.

ಅ) ಮೈಸೂರು ತಾಲ್ಲೂಕಿನ ಕೂರ್ಗಳ್ಳಿ ಗ್ರಾಮದ ಸುತ್ತಲಿನ ಜಮೀನುಗಳನ್ನು ಕೆಐಎಡಿಬಿಯವರು ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿದ್ದು ನಿಜವೇ;

ಹೌದು.

ಆ) ಹೌದಾದಲ್ಲಿ, ಈ ಪೈಕಿ ಗ್ರಾಮದ ಸುತ್ತಲೂ ಗ್ರಾಮಾಭಿವೃದ್ಧಿಗಾಗಿ ಹಾಗೂ ಈ ಜಮೀನುಗಳಲ್ಲಿ ಮನೆಗಳನ್ನು ನಿರ್ಮಿಸಿಕೊಂಡು ವಾಸವಿರುವಂತಹ ಜಮೀನುಗಳು ಸೇರಿ ಒಟ್ಟು 60 ಎಕರೆಯನ್ನು ಗ್ರಾಮಾಭಿವೃದ್ಧಿಗೆ ಬಿಟ್ಟುಕೊಡಲು ಕೋರಿಕೆ ಬಂದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಇ) ಬಂದಿದ್ದಲ್ಲಿ, ಪ್ರಸ್ತುತ ಈ ಪ್ರಕ್ರಿಯೆ ಯಾವ ಹಂತದಲ್ಲಿದೆ;

ಕೂರ್ಗಳ್ಳಿ ಕೈಗಾರಿಕಾ ಪ್ರದೇಶಕ್ಕೆ ಭೂಸ್ವಾಧೀನವಾಗಿರುವ ಒಟ್ಟು 544-16 ಎಕರೆ ಜಮೀನನ್ನು ಮಂಡಳಿಯ ಕೈಗಾರಿಕಾ ಪ್ರದೇಶಕ್ಕೆ ಭೂಸ್ವಾಧೀನಪಡಿಸಿ ಕಲಂ 28(8)ರಂತೆ ಮಂಡಳಿಯ ವಶಕ್ಕೆ ಈಗಾಗಲೇ ಹಸ್ತಾಂತರಿಸಲಾಗಿದ್ದು ಈ ಹಂತದಲ್ಲಿ ಈ ಜಮೀನನ್ನು ಗ್ರಾಮಾಭಿವೃದ್ಧಿಗೆ ನೀಡಲು ಕೆಐಎಡಿ ಕಾಯ್ದೆಯಲ್ಲಿ ಅವಕಾಶವಿರುವುದಿಲ್ಲ. ಆದರೂ ಸಹ ಈ ಜಮೀನನ್ನು ಗ್ರಾಮಾಭಿವೃದ್ಧಿಗೆ ನೀಡುವ ಬಗ್ಗೆ ಮಂಡಳಿ ಸಭೆಯಲ್ಲಿ ಮಂಡಿಸಿ, ಮಂಡಳಿ ತೆಗೆದುಕೊಳ್ಳುವ ನಿರ್ಣಯದಂತೆ ಕ್ರಮ ಜರುಗಿಸಲಾಗುವುದು.

ಈ) ಮೈಸೂರು ತಾಲ್ಲೂಕಿನ ಕಡಕೊಳ ಗ್ರಾಮದ ಸುತ್ತಮುತ್ತಲೂ ಸುಮಾರು 250 ಎಕರೆ ಜಮೀನನ್ನು ಜವಳಿ ಪಾರ್ಕ್ ಮಾಡಲು ಭೂಸ್ವಾಧೀನ ಪ್ರಕ್ರಿಯೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಉ) ಬಂದಿದ್ದಲ್ಲಿ, ಈ ಜಮೀನಿನ ಆರ್.ಟಿ.ಸಿ.ಯಲ್ಲಿ ಎಂದು ಉಲ್ಲೇಖಿಸಲಾಗಿದ್ದು ಸದರಿ ಜಮೀನುದಾರರಿಗೆ ಯಾವುದೇ ಪರಿಹಾರವನ್ನು ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು, ಸರ್ಕಾರಿ ಅಧಿಸೂಚನೆ ಪ್ರಕಟಣೆ ರೀತ್ಯಾ ಆರ್.ಟಿ.ಸಿ.ಗಳಲ್ಲಿ ಕೆಐಎಡಿಬಿ ಹೆಸರು ನಮೂದಿಸಲಾಗಿದೆ.

ಜವಳಿ ಪಾರ್ಕ್ ಸಲುವಾಗಿ ಭೂಸ್ವಾಧೀನವಾಗಿರುವ ಒಟ್ಟು 252–17 ಎಕರೆ ಜಮೀನಿಗೆ ಪರಿಹಾರ ಪಾವತಿಸುವ ಬಗ್ಗೆ ಜಿಲ್ಲಾಧಿಕಾರಿಗಳು. ಮೈಸೂರು ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ 18.9.2008 ಹಾಗೂ ದಿನಾಂಕ 22.6.2009ರಂದು ಭೂದರ ನಿರ್ಧರಣಾ ಸಲಹಾ ಸಮಿತಿ ಸಭೆಗಳನ್ನು ನಡೆಸಲಾಗಿದ್ದು ಒಪ್ಪಂದದ ದರದಲ್ಲಿ ಬೆಲೆ ನಿಗದಿಪಡಿಸುವಲ್ಲಿ ಒಮ್ಮತ ಮೂಡದ ಕಾರಣ ಸಭೆಯನ್ನು ಮುಂದೂಡಲಾಗಿದೆ. ಮತ್ತೊಮ್ಮೆ ಸಲಹಾ ಸಮಿತಿ ಸಭೆಯನ್ನು ಕರೆದು ಒಪ್ಪಂದದ ದರದಲ್ಲಿ ಬೆಲೆ ನಿಗದಿಪಡಿಸಿ ಅದರಂತೆ ಭೂಮಾಲೀಕರಿಗೆ ಪರಿಹಾರ ಪಾವತಿಸಲು ಕ್ರಮ ಜರುಗಿಸಲಾಗುವುದು.

ಕಡತ ಸಂ. ಸಿಐ 08 ಐಎಸಿ 2009.

(ಮುರುಗೇಶ ಆರ್.ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು.

ಕರ್ನಾಟಕ ವಿಧಾನ ಸಭೆ

198 ಶ್ರೀ ಶಿವಲಿಂಗೇಗೌಡ ಕೆ.ಎಂ.

ಮಾನ್ಯ ಸಣ್ಣ ನೀರಾವರಿ ಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಅ) ರಾಜ್ಯ ಸರ್ಕಾರ ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ 2008–09ರಲ್ಲಿ ಬಿಡುಗಡೆ ಮಾಡಿದ ಅನುದಾನದ ಮೊತ್ತ ಎಷ್ಟು ಹಾಗೂ ವೆಚ್ಚವಾದ ಅನುದಾನ ಎಷ್ಟು,

ರಾಜ್ಯ ಸರ್ಕಾರ ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ 2008–09ರಲ್ಲಿ ರೂ.610.00 ಲಕ್ಷಗಳನ್ನು ಬಿಡುಗಡೆ ಮಾಡಿದೆ. ಇದರ ಪೈಕಿ ರೂ.413.10 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಆ) 2009–10ರಲ್ಲಿ ನಿಗದಿಪಡಿಸಲಾಗಿರುವ ಅನುದಾನದ ಮೊತ್ತ ಎಷ್ಟು ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದೇ (ಮಾಹಿತಿ ನೀಡುವುದು)?

2009–10ರಲ್ಲಿ ಒಟ್ಟು 1000.00 ಲಕ್ಷ ರೂ.ಗಳನ್ನು ಒದಗಿಸಲಾಗಿದ್ದು ಇದರ ಪೈಕಿ 300.00 ಲಕ್ಷ ರೂ.ಗಳನ್ನು ವಿಶೇಷ ಘಟಕ ಯೋಜನೆಗಾಗಿ ಕ್ರೋಢೀಕರಿಸಿ ಸಮಾಜ ಕಲ್ಯಾಣ ಇಲಾಖೆಗೆ ನೀಡಲಾಗಿದೆ. ಇನ್ನುಳಿದ 700.00 ಲಕ್ಷ ರೂಗಳಿಗೆ ಶಾಸಕರುಗಳು ಶಿಫಾರಸ್ಸು ಮಾಡುವ ಅಭಿವೃದ್ಧಿ ಕಾರ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು.